ಶ್ರೀ ಎರ್. ಶ್ರೀಕಂಠಯ್ಯ.–ಸರ್ಕಾರದವರು ನಂಬಿಯಾರರಿಗೆ 25,000ರೂ, ಜವಳಿಯವರಿಗೆ 400ರೂ ಮತ್ತು ಇನ್ನೊಬ್ಬರಿಗೆ 2000ರೂ ಹೀಗೆಲ್ಲ ಕೊಟ್ಟಿರುವುದನ್ನು ನೋಡಿದರೆ ಇಲ್ಲಿ ನಮ್ಮ ಸರ್ಕಾರದಲ್ಲಿ ಕೆಲಸಮಾಡತಕ್ಕ ಸರ್ಕಾರಿ ಪ್ಲೀಡರ್ ಹಾಗೂ ಅಡ್ವಕೇಟರುಗಳಿಗೆ ಅಗೌರವ ಬರುವುದಿಲ್ಲವೇ ? ಅವರು ಬಹಳ ಪೂರ್ ಸ್ಟಫ್ ಎಂತ ಭಾವನೆ ಬರುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀರ್.—ಹಾಗೆ ಆಗುವುದಕ್ಕೆ ಅವಕಾಶವೂ ಇಲ್ಲ, ಸಾಧ್ಯವೂ ಇಲ್ಲ. ಹಿಂದೆ ಆ ಮಹಾಜನ್ ಕಮೀಷನ್ ಮುಂದೆ ನಮ್ಮ ಕೇಸಿನಲ್ಲಿ ವಾದ ಮಾಡುವುದಕ್ಕೂ ಹೀಗೇ ನಾವು ಈ ತಜ್ಞರನ್ನೇ ಇಟ್ಟುಕೊಂಡಿದ್ದೆವು.....

ಶ್ರೀ ಎರ್. ಶ್ರೀಕಂಠಯ್ಯ.—ನಮ್ಮ ಮೈಸೂರಿನಲ್ಲಿ ರಾಯರ್ ಇರಲಿಲ್ಲವೇ ?

ಶ್ರೀ ವೀರೇಂದ್ರ ಪಾಟೀರ್.—ಆ ರೀತಿ ಇಲ್ಲ ಇವರು ನಮ್ಮವರು, ಇವರು ಹೊರಗಿನವರು ಅನ್ನುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆಂಧ್ರದವರು ಅಲ್ಲಿ ಈಗ ಒಬ್ಬ ಎ. ಕೆ. ಸೇನ್ ಎಂಬುವವರನ್ನು ಇಟ್ಟುಕೊಂಡಿದ್ದಾರೆ. ಅಂದರೆ ಅವರಿಗೆ ಅಲ್ಲಿ ತಮ್ಮವರೇ ಆದ ಆಂಧ್ರದವರು ಯಾರೂ ಇರಲಿಲ್ಲ ಎಂದಲ್ಲ. ಅವರಿಗೆ ಬೇಕಾದ್ದು ಮುಖ್ಯವಾಗಿ ಅವರ ಕೇಸನ್ನು ಚೆನ್ನಾಗಿ ವಾದ ಮಾಡಿ ಗೆಲ್ಲುತಕ್ಕವರು ಬೇಕು. ಆದ್ದರಿಂದ ಅವರು ಹೊರಗಿನವರನ್ನೇ ಇಟ್ಟುಕೊಂಡಿದ್ದಾರೆ. ನಮ್ಮ ಮೈಸೂರಿನಲ್ಲೂ ಅಷ್ಟೇ. ಇಲ್ಲಿ ಯಾರೂ ವಾದಮಾಡತಕ್ಕವರಿಲ್ಲ ಎಂದಲ್ಲ—ನಮಗೆ ನಮ್ಮ ಕೇಸನ್ನು ಚೆನ್ನಾಗಿ ವಾದ ಮಾಡಲು ಒಬ್ಬ ನಿಪುಣರು ಬೇಕಾಗಿತ್ತು. ನಮ್ಮ ಹಕ್ಕುಭಾದ್ಯತೆಗಳನ್ನು ಕಾಪಾಡುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಗೂ ಮುಂಜಾಗರೂಕತೆಗಳನ್ನು ಕೈಕೊಳ್ಳಬೇಕೋ ಅವನ್ನೆಲ್ಲಾ ಮಾಡಿದ್ದೇವೆ. ಆದ್ದರಿಂದ ಇಲ್ಲ ಇವರು ನಮ್ಮವರು ಇವರು ಹೊರಗಿನವರು ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಹೇಳುತ್ತೇನೆ.

Sri H. SIDDAVEERAPPA.—Why is not the remuneration of the Advocate-General fixed whereas in the case of others, it is already fixed ?

Sri VEERENDRA PATIL.—Sir, we have not been able to fix the remuneration because I did not have a discussion with him. I propose to have discussion with him and I will see that his remuneration is fixed.

ಶ್ರೀ ಬಿ. ದೊಡ್ಡಬೋರೇಗೌಡ.—ಇದಕ್ಕೇನಾದರೂ ಸಮಯ ರಿಸ್ಟ್ರಿಕ್ಷನ್ ಹಾಕಿದ್ದೀರಾ ? ಇಷ್ಟೇ ದಿವಸಗಳಲ್ಲಿ ಅದು ಡಿಸೈಡ್ ಆಗಬೇಕೆಂದು ಕೇಂದ್ರ ಸರ್ಕಾರದವರು ಟ್ರಿಬ್ಯೂನರ್‌ಗೆ ಆದೇಶ ಕೊಟ್ಟಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀರ್.—ನನ್ನ ಮುಂದೆ ಆ ಮಾಹಿತಿ ಇಲ್ಲ. ಬಹುಶಃ ಅದನ್ನು ಇದನ್ನು ಇವತ್ತು ಹೇಳುವುದು ಕಷ್ಟವಾಗುತ್ತದೆ. ಟ್ರಿಬ್ಯೂನರ್ ಬಹಳ ದಿವಸಗಳವರೆಗೂ ಸಮಯ ತೆಗೆದು ಕೊಳ್ಳುವ ಹಾಗೆ ಇಲ್ಲ. ಅವರು ಮೇಲುಂದಮೇಲೆ ಕುಳಿತು ಅದಷ್ಟು ಬಾಗ್ಯತೆ ಅದನ್ನು ಇತ್ಯರ್ಥ ಮಾಡಬೇಕೆಂದು ಇದ್ದಾರೆ.

Raising the height of Tunga Anicut at Gajanur

161. Sri K. H. SRINIVASA (Sagar).—

Will the Chief Minister be pleased to state :—

(a) whether there is a proposal to raise the height of the Tunga Anicut at Gajanur, Shimoga District, if so, how much ;

(SRI K. H. SRINIVASA)

(*b*) the purpose and the additional lands that would be brought in the atchkat ;

(*c*) the total estimated cost for the same ;

(*d*) the stage at which the proposal stands at present ?

SRI VEERENDRA PATIL (Chief Minister).—

(*a*) Yes, by about 13.75 feet.

(*b*) For providing irrigation facilities to an area of 3,20,000 acres lying in Shimoga, Dharwar and Raichur Districts.

(*c*) Rs. 37·42 crores.

(*d*) The project is being sent to Central Water and Power Commission, for technical clearance.

ಶ್ರೀ ಕೆ. ಎಚ್. ಶ್ರೀನಿವಾಸ.—(ಅ)ಗೆ ಉತ್ತರವಾಗಿ ತುಂಗಾ ಅಣೆಕಟ್ಟಿನ ಎತ್ತರವನ್ನು 13·75 ಅಡಿಗಳವರೆಗೆ ಹೆಚ್ಚಿಸಲಾಗಿದೆಯೆಂದು ಹೇಳಿದ್ದೀರಿ. ಈಗ ಇರುವ ಹಾಗೆ ತುಂಗಾ ಅಣೆಕಟ್ಟಿನಲ್ಲಿ ಸುಮಾರು ನೂರು ಕ್ಯುಸೆಕ್ಸ್ ಹೆಚ್ಚುವರಿ ನೀರು ಇದೆ. ಅದರ ಉಪಯೋಗ ಆಗುತ್ತಾ ಇಲ್ಲವೆಂದು ಹೇಳಿರುವುದು ನಿಜವೇ ?

† ಶ್ರೀ ವೀರೇಂದ್ರ ಪಾಟೀಲ್.—ಅದರ ಬಗ್ಗೆ ಪ್ರತ್ಯೇಕವಾಗಿ ಪ್ರಶ್ನೆ ಹಾಕಿದರೆ ಹೇಳಬಹುದು.

ಶ್ರೀ ಎ. ಆರ್. ಬದರೀನಾರಾಯಣ್.—ತುಂಗಾ ಅಣೆಕಟ್ಟನ್ನು ಏರಿಸಿದರೆ, ಎಷ್ಟು ಎಕರೆ ಪ್ರದೇಶ ಮುಳುಗಡೆಯಾಗುತ್ತದೆ ಮತ್ತು ಎಷ್ಟು ಗ್ರಾಮಗಳು ಮುಳುಗಡೆಯಾಗುತ್ತವೆ. ಇದರಲ್ಲಿ ರಿಹ್ಯಾಬಿಲಿಟೇಷನ್ ಪ್ರೊಗ್ರಾಂ ಸೇರಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈ ಪ್ರಾಜೆಕ್ಟ್ ಎಸ್ಟಿಮೇಟ್ ಆಗಿ ಪ್ರಾಜೆಕ್ಟ್ ರಿಪೋರ್ಟ್ ತಯಾರಾಗಿದೆ. ಕೇಂದ್ರ ಸರ್ಕಾರಕ್ಕೆ, ಸಿ. ಡಬ್ಲ್ಯು. ಪಿ. ಸಿ.ಗೆ ಇದನ್ನು ಕಳುಹಿಸಿಕೊಡಲಾಗುತ್ತಿದೆ. ಅಪ್ಪರ್ ತುಂಗಾ ಅಣೆಕಟ್ಟಿಗೆ ಗೇಟ್ ಹಾಕಬೇಕಾಗಿರುವುದರಿಂದ ಬಹುಶಃ ಸುಮಾರು 21,100 ಎಕರೆ ಸಬ್‌ಮರ್ಜ್ ಆಗುತ್ತದೆಂದು ಅಂದಾಜು ಮಾಡಿದ್ದಾರೆ.

ಶ್ರೀ ಎಂ. ನಾಗಪ್ಪ.—(ಅ)ಗೆ ಉತ್ತರವಾಗಿ ಶಿವಮೊಗ್ಗ, ಧಾರವಾಡ ಮತ್ತು ರಾಯಚೂರು ಜಿಲ್ಲೆಗಳಲ್ಲಿರುವ 3,20,000 ಎಕರೆಗಳಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನೊದಗಿಸುವುದಕ್ಕಾಗಿ ಎಂದು ಹೇಳಿದೆ. ರಾಯಚೂರು ಜಿಲ್ಲೆಯಲ್ಲಿ ಎಷ್ಟು ಎಕರೆ ಪ್ರದೇಶಕ್ಕೆ ಈ ಸೌಲಭ್ಯ ಸಿಗುತ್ತದೆ ಮತ್ತು ಯಾವ್ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ?

ಶ್ರೀ ವೀರೇಂದ್ರ ಪಾಟೀಲ್.—ಜಿಲ್ಲಾವಾರು ಬ್ರೇಕಪ್ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ತುಂಗಾ ಅಣೆಕಟ್ಟನ್ನು ಏರಿಸಿದರೆ ಸುಮಾರು ಅನೇಕ ಸಾವಿರ ಎಕರೆಗಳಷ್ಟು ಅಡಿಕೆ ತೋಟಗಳು ಮತ್ತು ತರೀ ಜಮೀನು ಮುಳುಗಡೆಯಾಗುತ್ತದೆ. ತೀರ್ಥಹಳ್ಳಿ, ಶೃಂಗೇರಿ ಮತ್ತು ಕೊಪ್ಪ ತಾಲ್ಲೂಕುಗಳಿಂದ ಈ ಅಣೆಕಟ್ಟನ್ನು ಏರಿಸಬಾರದೆಂದು ಪ್ರಬಲವಾದ ಪ್ರತಿಭಟನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಈ ಪ್ರಾಜೆಕ್ಟ್ ರಿಪೋರ್ಟ್ ತಯಾರಾಗಿದೆ. ಈ ರಿಪೋರ್ಟನ್ನು ಸಿ. ಡಬ್ಲ್ಯು. ಪಿ. ಸಿ.ಗೆ ಕಳುಹಿಸಲಾಗುತ್ತಿದೆ. ಈ ಸಂದರ್ಭದಲ್ಲಿ ವಿವರಗಳನ್ನು ಕೊಟ್ಟಿದ್ದೇನೆ. ಸಬ್‌ಮರ್ಜ್ 21 ಸಾವಿರ ಚಿಲ್ಲರೆ ಎಕರೆ ಆಗುತ್ತದೆ. ಯಾವುದೇ ಪ್ರಾಜೆಕ್ಟ್ ತೆಗೆದುಕೊಂಡರೂ ಸಬ್‌ಮರ್ಜ್ ಆಗಲೇಬೇಕು. ಸಬ್‌ಮರ್ಜ್ ಆಗುವ ಜನ ಇದು ಆಗಬಾರದು ಎಂದು ಹೇಳಿದಾಗ ಅವರ ಮಾತೇ ನಾವು ಕೇಳುತ್ತಾ ಹೋದರೆ ಯಾವ ಹೊಸ ಕಾರ್ಯಗಳನ್ನೂ ತೆಗೆದು ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

2-00 P.M.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಮೂರು ಲಕ್ಷ 20 ಸಾವಿರ ಎಕರೆಗೆ ಎಷ್ಟು ನೀರು ಉಪಯೋಗವಾಗುತ್ತದೆ ಎಂದು ಅಂದಾಜು ಮಾಡಲಾಗಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—70 ಟಿ. ಎಂ. ಸಿ. ಎಫ್. ಟಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—70 ಟಿ. ಎಂ. ಸಿ. ಎಫ್. ಟಿ. ನೀರನ್ನು ತಾವು ಯಾವ ಕೋಟಾದಲ್ಲಿ ಮಿಟ್ ಮಾಡೋಣಾಗುತ್ತದೆ ?

ಶ್ರೀ ವೀರೇಂದ್ರಪಾಟೀಲ್.—ಅದರ ಬಗ್ಗೆ ಇವತ್ತು ಹೇಳುವ ಅವಶ್ಯಕತೆ ಇಲ್ಲ. ಅದು ಬೇರೆ ವಿಷಯಕ್ಕೆ ಸಂಬಂಧಪಟ್ಟದ್ದು.

ಶ್ರೀ ಕೆ. ಎನ್. ವೀರಪ್ಪಗೌಡ.—ಆಗಲೇ ದೇಶದಲ್ಲಿ ಮಳೆ ಸಾಕಷ್ಟು ಕಡಿಮೆಯಾಗಿದೆ. ಅರಣ್ಯ ಜಾಸ್ತಿಯಾಗಬೇಕೆಂದು ಹೇಳುತ್ತಿದ್ದಾರೆ. ಈಗ ಮರೆನಾಡಿನಲ್ಲಿ ಇದ್ದ ಕಾಡುಗಳೆಲ್ಲಾ ಹೋದರೆ ನಿಮಗೆ ನೀರಿಲ್ಲದೆ, ಅಣೆಕಟ್ಟುಗಳನ್ನು ಕಟ್ಟುತಕ್ಕ ಸಮಸ್ಯೆಯೇ ಉಂಟಾಗುವುದಿಲ್ಲವಲ್ಲ ?

ಶ್ರೀ ವೀರೇಂದ್ರ ಪಾಟೀಲ್.—ಪ್ರೊಜೆಕ್ಟ್ ರಿಪೋರ್ಟ್ ನಾವು ತಯಾರು ಮಾಡಿದ್ದೇನೆ. ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತಿದ್ದೇವೆ. ಪ್ರಾಜೆಕ್ಟ್ ರಿಪೋರ್ಟಿನ ಅಂಶ ಏನೆಂದು ಮಾನ್ಯ ಶ್ರೀನಿವಾಸರವರು ಕೇಳಿದರು, ಅದಕ್ಕೆ ಉತ್ತರವಾಗಿ ಹೇಳಿದ್ದೇನೆ.

Mr. SPEAKER.—Next question.

Sri H. M. CHANNABASAPPA.—May I make a submission ? What have we to do in order to catch the eye of the Speaker ? The standards and norms applied today are quite different from what is contemplated under the rules.

Mr. SPEAKER.—I shall explain after the questions are over.

Cadre and Recruitment Rules for fixing Seniority in Revenue Department

189. Sri M. DODDANAGOUD (Siruguppa).—

Will the Minister for Revenue be pleased to state :—

(*a*) the rules governing the service conditions of the Class-III Officials of the Revenue Department after the formation of New Mysore State ;

(*b*) whether the Government have recently issued instructions to the Divisional Commissioner, Gulbarga to follow the Hyderabad Cadre and Recruitment Rules, 1955 for fixing the seniority of Class-III Officials of the Revenue Department from 1st November 1956 to 8th June 1959 ;

(*c*) if so, whether the same benefit is extended to the officials of Bellary District and the Rules issued by the former State of Madras are allowed to be followed till 8th June 1959 ;

(*d*) the position of the officials of the Bellary District in regard to the Rules followed for fixing of seniority ?